ಅಸ್ತಿತ್ವಕ್ಕೇ ಧಕ್ಕೆ ಬಂದಂತೆನಿಸಿ ಕೊರಗಿ, ಸೊರಗಿದಳು.

ಭ್ರಮರ ವರ್ಸಸ್ ಬೀನಾರಾಣಿಯ ಈ ಶೀತಲಯುದ್ಧ ನಡೆಯುತ್ತಿದ್ದಂತೆ ಭ್ರಮರಳಿಗೆ ಬೆಳಗಿನ ಸವಿನಿದ್ದೆ, ಮಧ್ಯಾಹ್ನದ ನಿದ್ದೆ, ಯಾವುದೂ ರುಚಿಸದಾಯಿತು. ಬೀನಾರಾಣಿ ನಿಧಾನವಾಗಿ ತನ್ನ 27 ವರ್ಷದ ಸಾಮ್ರಾಜ್ಯಕ್ಕೆ ಧಕ್ಕೆ ತರುವುದು ಖಚಿತವೆನಿಸಿತು. ಕೆಲವೊಮ್ಮೆ ಇದು ಅವಳನ್ನು ನೇರವಾಗಿಯೆ ಬೀನಾರಾಣಿಯನ್ನು ಲೇವಡಿ ಮಾಡಲು ಪ್ರೇರೇಪಿಸಿತು. “ನೀವಿನ್ನು ಚಿಕ್ಕವರು, ಯಾಕೆ ಹೀಗೆ ಯಾವುದೋ ಸೀರೆ ಏನೋ ಬ್ಲೌಸ್, ಹೀಗೆಲ್ಲಾ ಬರ್ತೀರ? ಹುಡುಗೀರು ಎಷ್ಟು ಆಡ್ಕೊತಾರೆ ಗೊತ್ತಾ” ಎನ್ನುತ್ತಾ ಇಡೀ ಸ್ಟಾಫ್ ರೂಂ ಗಮನ ಅವಳತ್ತ ಸರಿಯುವಂತೆ ಮಾಡಿದಳು. ಬೀನಾರಾಣಿ ತನ್ನ ಎವರ್‌ಗ್ರೀನ್ ನಗೆ ಮಾಸದಂತೆ ಮುತ್ತೊಂದನ್ನು ಉದುರಿಸಿದಳು, “ನಾವು ಹೇಗೆ ಡ್ರೆಸ್ ಮಾಡ್ತೀವಿ ಅನ್ನೋದನ್ನ ಆರಂಭದಲ್ಲಿ ಗಮನಿಸಬಹುದು, ಇಲ್ಲಾಂತಲ್ಲ. ಆದರೆ, ಕೊನೆಯಲ್ಲಿ ಉಳಿಯೋದು ನೀವು ಹೇಗೆ ಪಾಠ ಮಾಡ್ತೀರಿ ಅನ್ನೋದೆ. ಮೈಸೂರು ಸಿಲ್ಕ್ ಉಟ್ಟುಕೊಂಡು ಏನೂ ಪಾಠ ಮಾಡ್ದೇ ಇದ್ರೂ ಆಗುತ್ತಾ! ಅವರಿಗೆ ಬೇಕಾಗಿರೋದು ಗುಡ್ ಟೀಚಿಂಗ್, ನನ್ನ ಡ್ರೆಸ್ ಸೆಕೆಂಡರಿ”. ಈ ಒನ್‌ಲೈನರ್‌ಗಳು ಅವಳನ್ನು ಇನ್ನೂ ಗಾಸಿಗೊಳಿಸುತ್ತಿದ್ದವು. ಬೀನಾರಾಣಿ ಸ್ಟಾಫ್ ರೂಂನ ತನ್ನ ಪ್ರಾಧಾನ್ಯವನ್ನೆಲ್ಲಾ ತನ್ನ ಮೌನದಿಂದಲೇ ಕಸಿದುಬಿಡುವಳೋ ಎನ್ನುವ ದಿಗಿಲು ದಿನೇದಿನೇ ದೊಡ್ಡದಾಯಿತು. ಅವಳು ತನ್ನ ಗ್ರೌಂಡ್‌ವರ್ಕನ್ನು ಜಾಗರೂಕತೆಯಿಂದಲೇ ಮಾಡತೊಡಗಿದಳು. ಒಂದೆರಡು ಮೂಗರ್ಜಿಗಳನ್ನೂ ಸ್ಟೂಡೆಂಟ್ಸ್ ಬರೆದಂತೆ ಬರೆಸಿ, ಸೇರಬೇಕಾದ ಕಡೆ ಸೇರಿಸಿದಳು. ಮಾರ್ಚ್‌ನಲ್ಲಿ ಮಾಮೂಲಿ ಕೊಡುವಾಗ ಅಲ್ಲಿಂದ 80 ಕಿಲೋ ಮೀಟರ್ ದೂರದಲ್ಲಿರುವ ಬಹಳ ರಿಮೋಟ್ ಏರಿಯಾದಲ್ಲಿ ಖಾಲಿ ಇರುವ ಜಾಗಕ್ಕೆ ಬೀನಾರಾಣಿಯನ್ನು ಹಾಕಬಹುದು ಎನ್ನುವ ಸೂಚನೆಯೊಂದಿಗೆ 5,000 ರೂಪಾಯಿಗಳನ್ನು ತಾನು ಮಾಮೂಲಿಯಾಗಿ ಕೊಡುವ ಹಣಕ್ಕೆ ಸೇರಿಸಿ ಕೊಟ್ಟಳು. ಇವೆಲ್ಲದರ ಪರಿಣಾಮವೋ ಎಂಬಂತೆ ಆ ವರ್ಷದ ವರ್ಗಾವಣೆ ಪಟ್ಟಿಯಲ್ಲಿ ಬೀನಾಳ ಹೆಸರು ರಾರಾಜಿಸಿತು. ಬೀನಾರಾಣಿ ಪೆಚ್ಚಾದಂತೆ ಕಂಡಾಗ ಭ್ರಮರಳಿಗೆ ಹೋಳಿಗೆ ಕರ್ಜಿಕಾಯಿ ಒಟ್ಟಿಗೇ ತಿಂದಂತೆ ಭಾಸವಾಯಿತು. ಪದೇ ಪದೇ, “ಪಾಪ! ಚಿಕ್ಕಮಗು, ಬಂದಿನ್ನೂ ಎರಡು ವರ್ಷವೂ ಆಗಿಲ್ಲ. ದಿನಾ ಓಡಾಡೋದು ಕಷ್ಟ, ಮನೇಲಿ ವಯಸ್ಸಾದ ಅತ್ತೆಮಾವ, ಬಿಟ್ಟುಹೋಗೋಹಾಗಿಲ್ಲ” ಎಂದು ಮೊಸಳೆ ಕಣ್ಣೀರನ್ನು ಒಂದೆರಡು ಕೊಡ ಸುರಿಸಿಯೇಬಿಟ್ಟಳು. ಬೀನಾರಾಣಿ ರಿಲೀವ್ ಆಗುವ ದಿನ ಸರಿಯಾಗಿ ನಾಲ್ಕು ಗಂಟೆಗೆ ತನ್ನ ಮಧ್ಯಾಹ್ನದ ನಿದ್ದೆಯನ್ನೂ ತ್ಯಾಗಮಾಡಿ ಅಲ್ಲಿಯೇ ಉಳಿದಳು. ತನ್ನ ಶತ್ರು ನಿರ್ಗಮಿಸುವ ದೃಶ್ಯವನ್ನು ಕಣ್ಣತುಂಬಾ ತುಂಬಿಕೊಳ್ಳುವ ಬಯಕೆ ಅವಳದು. ಮಧ್ಯಾಹ್ನ ಬೀನಾ ಕಾಣದಾದಾಗ ವಿಚಾರಿಸಿದಾಗ ಅವಳು ಕ್ಲಾಸಿಗೆ ಹೋಗಿರುವುದಾಗಿ ತಿಳಿದು ಉರಿದಳು, “ಹರಿಶ್ಚಂದ್ರನ ಮಗಳು! ಕೊನೇ



ಕ್ಲಾಸು ಬಿಡೋಲ್ಲ”. ಬೀನಾ ಕ್ಲಾಸು ಮುಗಿಸಿ ಬಂದಾಗ, “ಪಾಪ, ಯಾಕೆ ಕ್ಲಾಸು ತೆಗೊಂಡ್ರಿ? ನಿಮಗೂ ಈ ಕಾಲೇಜಿಗೂ ಏನು ಮುಲಾಜು? ಕೊನೇ ಕ್ಲಾಸು ಬಿಟ್ಟುಬಿಡಬಹುದಿತ್ತಲ್ವಾ” ಎಂದಾಗ ಬೀನಾ ಇನ್ನೊಂದು ಒನ್‌ಲೈನರ್ ಎಸೆದಳು – “ಇವತ್ತಿನವರೆಗೂ ಇಲ್ಲಿ ನನ್ನ ಡ್ಯೂಟಿ ಅಂದಮೇಲೆ ಬಿಡೋ ಪ್ರಶ್ನೆ ಎಲ್ಲಿಂದ ಬಂತು? ಇನ್ನು, ಒಬ್ಬ ಟೀಚರ್‌ಗೆ ಕೊನೇ ಕ್ಲಾಸು ಅಂತ ಯಾವುದೂ ಇಲ್ಲ. ಎಲ್ಲಾ ಕ್ಲಾಸುಗಳು ಮೊದಲನೆ ಕ್ಲಾಸಿನಷ್ಟೆ ಉತ್ಸಾಹದಿಂದಿರಬೇಕಲ್ಲ” ಎಂದಾಗ ಮನಸ್ಸಿನಲ್ಲಿಯೇ ಆಹಾ! ನೀನು ಹೇಳೋ ಒಂದೊಂದು ನುಡಿಮುತ್ತು ಆರಿಸಿಕೊಂಡು ಹಾರ ಮಾಡ್ಕೊಬೇಕು ಎಂದು ಗೊಣಗಿಕೊಂಡಳು. ಬೀನಾರಾಣಿ ರಿಲೀವ್ ಆಗಿ ತನ್ನ ಸ್ಕೂಟಿ ಮೇಲೆ ಹೊರಡಲು ಸಿದ್ಧಳಾದಾಗ ಬೀನಾರಾಣಿಯ ಪಕ್ಕದಲ್ಲಿಯೇ ತನ್ನ ಎಟಿಯೋಸನ್ನು ದೂಳೆಬ್ಬಿಸಿಕೊಂಡು ಹೊರಟ ಭ್ರಮರಳಿಗೆ ಜೀವ ಹಾಯೆನ್ನಿಸುತ್ತಿತ್ತು. ಕಾರಿನ ಗ್ಲಾಸ್ ಸರಿಸಿ ಬೀನಾರಾಣಿಯ ಪೆಚ್ಚುಮುಖವನ್ನು ಒಮ್ಮೆ ನೋಡಬೇಕೆಂದು ಆಶಿಸಿದವಳಿಗೆ ಅವಳನ್ನು ಸುತ್ತುವರೆದಿದ್ದ ಹುಡುಗ ಹುಡುಗಿಯರು ಅಡ್ಡವಾದರು.

ಹೀಗೆ ಬೀನಾ ಅನ್ನದಲ್ಲಿದ್ದ ಕಲ್ಲಿನಂತೆ ದೂರವಾದರೂ ಭ್ರಮರಳಿಗೆ ದುಃಸ್ವಪ್ನವಾಗಿಯೇ ಉಳಿದಳು. ಮಳೆ ಬರುತ್ತಿರುವಾಗ ಗಂಟೆ ಎಂಟಾದರೂ ಕಂಬಳಿಹೊದ್ದು ಮಲಗಿರುವಾಗ ಈಗ ಬೀನಾರಾಣಿ ಕಳ್ಳಿಬಂಡೆಯ ಬಸ್ಸಿನಲ್ಲಿ ಕುಲುಕಿಕೊಂಡು ಹೋಗುತ್ತಿರಬಹುದು ಎಂದು, ಸಾಯಂಕಾಲ ಪಾರ್ಕ್‌ನಲ್ಲಿ ಹಂಸದಂತೆ ನಡೆಯುತ್ತಿರುವಾಗ ಈಗಿನ್ನು ಬೀನಾ ಬಸ್ಸಿನಲ್ಲಿ ಕುಲುಕಿಕೊಂಡು ಬರುತ್ತಿರಬಹುದು ಎಂದು ಕಲ್ಪಿಸಿಕೊಂಡು ಆನಂದಿಸುತ್ತಿದ್ದಳು. ಅವಳ ಸಹೋದ್ಯೋಗಿಯೊಬ್ಬಳು, “ಪಾಪ! ಬೀನಾನ ನೋಡೋಕೆ ಆಗೋಲ್ಲ, ಮಗೂನ ಬೇಬಿ ಸಿಟ್ಟಿಂಗ್‌ನಲ್ಲಿ ಬಿಡುತ್ತಾರಂತೆ. ಬರೋದು ಏಳಾಗುತ್ತಂತೆ. ಯಾರಿಗಾದರು ಒಂದೆರಡು ಲಕ್ಷ ತಳ್ಳಿ ಇಲ್ಲಿಗೇ ಬಂದುಬಿಡಿ ಅಂದೆ. ನನ್ನ ಲೈಫ್‌ನಲ್ಲಿ ಯಾರಿಗೂ ಲಂಚ ಕೊಟ್ಟಿಲ್ಲ, ಕೊಡೋದೂ ಇಲ್ಲ, ಟೀಚರ್ಸಾಗಿ ನಾವೇ ಲಂಚಕ್ಕೆ ಇಳಿದ್ರೆ ಏನು ಅರ್ಥ ಅಂದ್ರು” ಅಂದಾಗ ಭ್ರಮರ ಉರಿದು ಹೋದಳು. ಇವಳ ತಲೆ, ನಾಲ್ಕು ವರ್ಷ ಪ್ರಯಾಣ ಮಾಡಿ ಮೂಳೆ ಸವೆದ್ರೆ ಗೊತ್ತಾಗುತ್ತೆ ಎಂದುಕೊಂಡಳು. ಆದರೂ ರಾತ್ರಿ ಒಂದು ಹೊತ್ತಿನಲ್ಲಿ ಬೀನಾರಾಣಿ ದೊಡ್ಡದಾಗಿ ಬೆಳೆದು ತನ್ನನ್ನು ನೋಡಿ ನಗುತ್ತಿರುವಂತೆ ಭಾಸವಾಗಿ ಮೇಲೆದ್ದು ನೀರು ಕುಡಿದು ಮಲಗಿಕೊಂಡಳು. ಹೀಗೆಯೆ ಒಂದು ದಿನ ತನ್ನ ಮ್ಯಾಟಿನಿ ನಿದ್ದೆ ಮುಗಿಸಿ ದೊಡ್ಡ ಫ್ಲವರ್ ಶೋಗೆ ಹೊರಟಳು. ಹಸಿರು ಹಾಸಿನ ನಡುವೆ ಕುಳಿತವಳಿಗೆ ಜೀವ ಹಾಯೆನಿಸಿತು. ಹಾಲಿಫಾಕ್ಸ್‌ಗಳ ಸಾಲು, ಕಾಕ್ಸ್‌ಕೂಮ್‌ಗಳ ಚೆಲುವು ಮನ ಸೆಳೆಯುತ್ತಿರುವಾಗಲೇ, ತನ್ನ ಮಗುವಿಗೇನೋ ತೋರಿಸುತ್ತಾ ಬಗ್ಗಿ ನಿಂತಿದ್ದ ಬೀನಾರಾಣಿ ಕಂಡಳು. ಅವಳ ಮುಖದಲ್ಲಿನ ಎವರ್‌ಗ್ರೀನ್ ನಗೆ ಮಾಸಿದೆಯೋ ಎಂದು ನೋಡುವ ಆಸೆಯಿಂದ ಅವಳ ಹತ್ತಿರ ನಡೆದಳು. ಬಸ್ಸಿನಿಂದ ನೇರ ಬಂದಿದ್ದಳೋ ಏನೋ, ಸುಕ್ಕುಸುಕ್ಕಾದ ಸೀರೆ, ಬಾಡಿದ ಮುಖ, “ಹಲೋ, ಬೀನಾ ಬಸ್ಸಿಂದ ನೇರ ಬಂದ್ರಾ? ದಿನಾ ಇಷ್ಟೆ ಹೊತ್ತಾಗುತ್ತಾ?” ಎಂದಳು.

“ಇಲ್ಲಾ, ಇನ್ನೂ ಲೇಟಾಗುತ್ತೆ. ಇವತ್ತು ಏನೋ ಫಂಕ್ಷನ್, ಹಾಗಾಗಿ ಸ್ವಲ್ಪ ಬೇಗ ಬಂದೆ.”

“ಅಯ್ಯೋ, ನಿಮ್ಮ ಮುಖ ನೋಡೋಕಾಗೊಲ್ಲ, ಮನೇಲಿ ರೆಸ್ಟ್ ತೆಗೋಬೇಕಿತ್ತು.”

“ನನಗೆ ಸುಸ್ತಾಗಿದೆ ಅಂತ ಮಗೂಗೆ ಸಿಗೊ ಖುಷಿ ಯಾಕೆ ತಪ್ಪಿಸಬೇಕು? ನೋಡಿ, ಎಷ್ಟು ಖುಷಿ ಪಡ್ತಾ ಇದಾನೆ.”

ಅರಳಿದ ಕಾಕ್ಸ್‌ಕೂಮ್ ಒಂದನ್ನು ನೋಡಿ ಮಗು ಎಂಟು ವ್ಯಾಟ್‌ನ ಬಲ್ಬಿನ ನಗೆಯೊಂದನ್ನು ಚೆಲ್ಲಿತು. ಆ ನಗೆ ಬೀನಾರಾಣಿಯ ಮುಖದ ಮೇಲೂ ಹರಡಿ ಸುತ್ತಮುತ್ತಲೆಲ್ಲಾ ಪ್ರತಿಫಲಿಸಿತು. ಆ ಹೊತ್ತಿಗೆ ಫ್ಲವರ್ ಶೋ ನೋಡಲು ಬಂದಿದ್ದ ಕಾಲೇಜಿನ ಕೆಲವು ಹುಡುಗ ಹುಡುಗಿಯರು, ಬೀನಾರಾಣಿಯನ್ನು ಮುತ್ತಿಕೊಂಡರು. ಭ್ರಮರಳಿಗೆ ಏಕೋ ಕಾಲು ನೋವೆನಿಸಿ ಹಾಸಿನ ಮೇಲೆ ಕುಳಿತಳು. ಕುಳಿತ ಮೇಲೆಯೇ ಗಮನಿಸಿದ್ದು. ಸುತ್ತಲೂ ತಿಂದು ಬಿಸಾಡಿದ ಪ್ಲಾಸ್ಟಿಕ್ ತಟ್ಟೆಗಳು, ಎಣ್ಣೆಜಿಡ್ಡು ಪೇಪರ್‌ಗಳು, ತಿಂದು ಬಿಸಾಡಿದ ಹಪ್ಪಳದ ಚೂರುಗಳು, ಬೋಂಡಾದ ತುಣುಕುಗಳು. ಗಲೀಜು ಎನಿಸಿದರೂ ಮೇಲೇಳಲಾರದೆ ಅಲ್ಲೇ ಸಾಮ್ರಾಜ್ಯ ಹೂಡಿದಳು. ಅಲ್ಲಿಂದಲೇ ಬೀನಾರಾಣಿ ಏನು ಮಾಡುತ್ತಿದ್ದಾಳೋ ಎಂದು ನೋಡಬೇಕೆಂದುಕೊಂಡು ಕುತ್ತಿಗೆ ಉದ್ದ ಮಾಡಿದವಳಿಗೆ ಬೀನಾಳ ಸುತ್ತ ನಿಂತಿದ್ದ ಹುಡುಗ ಹುಡುಗಿಯರು ಮರೆಯಾದ್ದರಿಂದ ಅವಳ ಮುಖ ಕಾಣಲಿಲ್ಲ. ಸುತ್ತಲೂ ನಗುತ್ತಾ ನಿಂತಿದ್ದ ಹುಡುಗ ಹುಡುಗಿಯರು, ಅರಳಿ ನಗುತ್ತಿದ್ದ ನೂರಾರು ಹೂಗಳು, ಎಲ್ಲೆಲ್ಲೂ ಹರಡಿ ನಗುತ್ತಿದ್ದಂತೆ ಅತ್ತಲೂ ನೋಡಲಾರದೆ, ಸುತ್ತಲೂ ಇದ್ದ ಕೊಳೆಯನ್ನೂ ನೋಡಲಾರದೆ ಗಂಟಲೊಣಗಿ ಕಣ್ಣು ಮುಚ್ಚಿಕೊಂಡಳು.

ಪ್ರತಿಕ್ರಿಯಿಸಿ: feedback@sudha.co.in